ಅವನಾಗಿಯೇ ಹೋಗಿದ್ದಾನೆ; ತಾನಾಗಿಯೇ ಬರಲಿ ಎಂದುಕೊಂಡು ಸುಮ್ಮನಾದಳು. ಹೀಗೆ ದಿನಗಳು ವಾರಗಳಾದವು, ವಾರಗಳು ತಿಂಗಳುಗಳಾದವು, ತಿಂಗಳುಗಳು ವರ್ಷಗಳಾದವು. ಬರೋಬ್ಬರಿ ಆರು ವರ್ಷಗಳು! ಈ ಆರು ವರ್ಷಗಳು ಅದ್ಹೇಗೆ ಸರಿದುಹೋದವೋ. ಅವನ ನೆನಪೇ ಆಗಲಿಲ್ಲವೆಂದಲ್ಲ. ಆಗಾಗ ನೆನಪಾಗುತ್ತಿತ್ತು. ಮನಸ್ಸು ಮುದುಡುತ್ತಿತ್ತು. ಆದರೆ ಆತ್ಮಾಭಿಮಾನ ಸೋಲೊಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ತನ್ನದಲ್ಲದ ತಪ್ಪಿಗೆ ತಾನೇಕೆ ಶಿಕ್ಷೆ ಅನುಭವಿಸಬೇಕು ಎನ್ನುವ ಹಟ. ಅವನನ್ನು ಹುಡುಕುವ ಪ್ರಯತ್ನಕ್ಕೆ ಹೋಗಲಿಲ್ಲ.

"ಏ ಸಂಜನಾ ಏನು ಯೋಚಿಸ್ತಾ ಇದ್ದೀಯ. ಬಾಕ್ಸ್ ತಗೊಂಡು ಬಾರೆ. ಲಂಚ್ ಅವರ್ ಮುಗಿದು ಹೋಗುತ್ತೆ ಅಷ್ಟೇ."

ಸಹೋದ್ಯೋಗಿಯೊಬ್ಬಳು ಕೂಗಿ ಕರೆದಳು. ಎಚ್ಚೆತ್ತ ಸಂಜನಾ ತನ್ನ ಯೋಚನಾಲಹರಿ ನಿಲ್ಲಿಸಿ ಅವರೊಂದಿಗೆ ಊಟಕ್ಕೆ ಹೋದಳು.

ಊಟ ಮಾಡುವಾಗಲೂ ಅವಳು ಅನ್ಯಮನಸ್ಕತೆಯಿಂದ ಹೊರಬರಲಾಗಲಿಲ್ಲ.

"ನಾನು ಇವತ್ತು ಬೇಗ ಮನೆಗೆ ಹೋಗಬೇಕು ಕಣೇ" ಎಂದು ಸಂಜನಾ ಸಹೋದ್ಯೋಗಿ ನಂದಿತಾಳಿಗೆ ಹೇಳಿದಾಗ ಅವಳು ಅಚ್ಚರಿಯಿಂದ ಸಂಜನಾಳ ಮುಖನೋಡಿದಳು.

"ಶಶಿಧರ ಫೋನ್ ಮಾಡಿದ್ದ..." ಎಂದು ಮೆಲ್ಲಗೆ ನುಡಿದಾಗ ನಂದಿತಾ ಹುಬ್ಬು ಹಾರಿಸಿದಳು.

"ಶಶಿಧರ! ನಿನ್ನ ಗಂಡ!"

ಹೌದು ಎನ್ನುವಂತೆ ತಲೆ ಆಡಿಸಿದಳು ಸಂಜನಾ.

"ಶಶಿ ನನ್ನೊಂದಿಗೆ ಮಾತನಾಡಲು ಬಯಸಿದ್ದಾನೆ" ಎಂದು ಸ್ವಲ್ಪ ಹೊತ್ತು ಕಣ್ಣು ಮುಚ್ಚಿಕೊಂಡು ದೀರ್ಘವಾಗಿ ಉಸಿರೆಳೆದುಕೊಂಡು ಮಾತು ಮುಂದುವರೆಸಿದಳು.

"ನಾಳೆ ಸಂಜೆ ಮನೆಗೆ ಬರುತ್ತೇನೆ ಅಂತ ಫೋನ್ ಮಾಡಿದ್ದ. ಅವನ ದನಿ ತುಂಬಾ ಮೃದುವಾಗಿತ್ತು. ಒಂದು ರೀತಿ ಪಶ್ಚಾತ್ತಾಪದಿಂದ ತುಂಬಿತ್ತು. ನಂದಿತಾ... ಖಂಡಿತಾ ಅವನಿಗೆ ತನ್ನ ತಪ್ಪಿನ ಅರಿವಾಗಿದೆ. ನನ್ನೊಂದಿಗೆ ಮತ್ತೆ ಸಂಸಾರ ಮಾಡಲು ಬಯಸಿರುವಂತೆ ಕಾಣುತ್ತೆ. ಅವನಿಗೆ ಈಗ ನಾನು ಬೇಕೆನಿಸಿರಬೇಕು."

"ನಿನ್ನ ನಿರ್ಧಾರ ಏನು?" ಎಂದ ನಂದಿತಾ, ಸಂಜನಾಳ ಮನಃಸ್ಥಿತಿಯನ್ನು ಅರಿಯಲು ಪ್ರಶ್ನಿಸಿದಳು.

ಸಂಜನಾಳ ಕಣ್ಣಾಲಿಗಳು ತುಂಬಿಕೊಂಡವು. ದನಿ ತೆಳುವಾಯಿತು.

"ಹೌದು ನಾನೂ ಬದಲಾಗಬೇಕಾಗಿದೆ. ನನಗೂ ಈ ಒಂಟಿ ಜೀವನ ಸಾಕೆನಿಸಿಬಿಟ್ಟಿದೆ. ಓಹ್, ಈ ಆರು ವರ್ಷಗಳು ನನ್ನ ಬಾಳಿನ ಕೆಟ್ಟ ಅವಧಿ ಎಂದುಕೊಳ್ಳುತ್ತೇನೆ. ನಾನು ಅನುಭವಿಸಿದ ಕಷ್ಟ ನನ್ನ ಶತ್ರುಗಳಿಗೂ ಬೇಡ.

ನಾನೂ ಶಶಿಧರ ಪರಸ್ಪರ ಪ್ರೀತಿಸಿ, ಮನೆಯವರ ವಿರೋಧದ ನಡುವೆ ಮದುವೆಯಾದೆವು. ಅನ್ಯ ಜಾತಿಯವನನ್ನ ಪ್ರೀತಿಸಿ ಮದುವೆಯಾದದ್ದಕ್ಕೆ ನನ್ನ ಹೆತ್ತವರು, ನನ್ನ ಅಕ್ಕ, ಅಣ್ಣ ನನ್ನನ್ನು ದೂರಮಾಡಿದರು. ಶಶಿಧರನ ಮನೆಯವರಂತೂ ನನ್ನ ನೆರಳೂ ಕಂಡರಾಗದವರಂತೆ ಕೆರಳಿದ್ದರು. ಮನೆಬಾಗಿಲಿಗೆ ಬಂದು ನಿಂತ ನಮ್ಮಿಬ್ಬರನ್ನು ಕುತ್ತಿಗೆ ಹಿಡಿದು ಆಚೆ ದಬ್ಬಿದರು. ಯಾರೂ ನಮ್ಮ ಸಹಾಯಕ್ಕೆ ಬರಲಿಲ್ಲ. ಮೊಟ್ಟಮೊದಲಬಾರಿಗೆ ನಾವಿಬ್ಬರೂ ಅನಾಥರಾದೆವೆಂಬ ಭಾವನೆ ನನಗೆ ಮೂಡಿತ್ತು.

ಶಶಿಧರ ಕಂಗೆಟ್ಟಿದ್ದ. ನಾನು ಅವನಲ್ಲಿ ಧೈರ್ಯತುಂಬಿದೆ. ಒಂದು ಸಣ್ಣ ಬಾಡಿಗೆ ಮನೆ